## ಕರ್ನಾಟಕ ವಿಧಾನಸಭೆಯ ಕಾರ್ಯವಿಧಾನ ಮತ್ತು ಕಾರ್ಯಕಲಾಪಗಳ ನಿಯಮಗಳ 79ನೇ ನಿಯಮದಿಂದ ಅಗತ್ಯಪಡಿಸಲಾದಂತೆ ವಿವರಣಾತ್ಮಕ ಹೇಳಿಕೆ

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) ಅಧಿನಿಯಮ, 1974ನ್ನು ತಿದ್ದುಪಡಿ ಮಾಡುವ ಮೂಲಕ 'ಸಾರ್ವಜನಿಕ ಆವರಣಗಳ' ಎಂಬ ಪದದ ಅರ್ಥವ್ಯಾಪ್ತಿಯಲ್ಲಿ ವಿಶ್ವವಿದ್ಯಾಲಯಗಳಿಗೆ ಸೇರಿದ ಮತ್ತು ವಿಶ್ವವಿದ್ಯಾಲಯಗಳ ಮೂಲಕ ಅಥವಾ ಅವುಗಳ ಪರವಾಗಿ ಗುತ್ತಿಗೆಗೆ ತೆಗೆದುಕೊಳ್ಳಲಾದ ಆವರಣಗಳನ್ನು ಒಳಗೊಳ್ಳುವಂತೆ ಮಾಡುವುದು ಮತ್ತು 'ಸ್ಥಳೀಯ ಪ್ರಾಧಿಕಾರ' ಎಂಬ ಪದದ ಅರ್ಥವ್ಯಾಪ್ತಿಯಲ್ಲಿ ಅಭಿವೃದ್ಧಿ ಮಂಡಲಿಗಳು, ಜಿಲ್ಲಾ ಪರಿಷತ್ತುಗಳು, ಮಂಡಲ್ ಪಂಚಾಯತಿಗಳು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಮತ್ತು ನಗರಾಭಿವೃದ್ಧಿ ಪ್ರಾಧಿಕಾರಗಳನ್ನು ಒಳಗೊಳ್ಳುವಂತೆ ಮಾಡುವುದು ಅವಶ್ಯವೆಂದು ಪರಿಗಣಿಸಲಾಗಿದೆ. ಆದೇ ಪ್ರಕಾರ, ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರನ್ನು ಒಕ್ಕಲೆಬ್ಬಿಸುವ) (ತಿದ್ದುಪಡಿ) ಅಧ್ಯಾದೇಶ, 1992ನ್ನು ಪ್ರಖ್ಯಾಪಿಸಲಾಯಿತು.

ರಾಜ್ಯ ವಿಧಾನಮಂಡಲದ ಉಭಯ ಸದನಗಳೂ ಅಧಿವೇಶನದಲ್ಲಿಲ್ಲದಿದ್ದುದರಿಂದ ಮತ್ತು ವಿಷಯವು ತುರ್ತು ಸ್ವರೂಪದ್ದಾಗಿದ್ದುದರಿಂದ ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರ ಒಕ್ಕಲೆಬ್ಬಿಸುವ) (ತಿದ್ದುಪಡಿ) ಅಧ್ಯಾದೇಶ, 1992ನ್ನು (1992ರ ಕರ್ನಾಟಕ ಅಧ್ಯಾದೇಶ) ಪ್ರಖ್ಯಾಪಿಸಲಾಯಿತು.

**ಎಂ. ರಾಜಶೇಖರ ಮೂರ್ತಿ**
*ಕಂದಾಯ ಸಚಿವರು*

**ಮ. ಇನ್ನಾಸಪ್ಪ**
*ಕಾರ್ಯದರ್ಶಿ*

## ಅನುಬಂಧ

ಕರ್ನಾಟಕ ಸಾರ್ವಜನಿಕ ಆವರಣಗಳ (ಅನಧಿಕೃತ ಅಧಿಭೋಗದಾರರ ಒಕ್ಕಲೆಬ್ಬಿಸುವ) ಅಧಿನಿಯಮ, 1974 (1974ರ ಕರ್ನಾಟಕ ಅಧಿನಿಯಮ ಸಂಖ್ಯೆ 32)ರ ಉದ್ಧೃತ ಭಾಗಗಳು.

xx xx xx xx

2. **ಪರಿಭಾಷೆಗಳು** :– ಈ ಅಧಿನಿಯಮದಲ್ಲಿ, ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ

(ಎ) xx xx xx

(ಬಿ) xx xx xx

(ಸಿ) xx xx xx

(ಡಿ) xx xx xx

(ಇ) "ಸಾರ್ವಜನಿಕ ಆವರಣಗಳು" ಎಂದರೆ ರಾಜ್ಯ ಸರ್ಕಾರಕ್ಕೆ ಸೇರಿದ ಅಥವಾ ಹಂಚಿಕೆ ಮಾಡಲಾಗಿರುವ ಅಥವಾ ರಾಜ್ಯ ಸರ್ಕಾರ ಅಥವಾ ಅದರ ಪರವಾಗಿ ಗುತ್ತಿಗೆ ಮೇಲೆ ತೆಗೆದುಕೊಂಡಿರುವ ಅಥವಾ ಕೋರಿಕೆ ಸಲ್ಲಿಸಲಾಗಿರುವ ಯಾವುದೇ ಆವರಣಗಳು ಮತ್ತು ಈ ಮುಂದಿನವುಗಳಿಗೆ ಸೇರಿದ ಅಥವಾ ಅವುಗಳ ಅಥವಾ ಅವುಗಳ ಪರವಾಗಿ ಗುತ್ತಿಗೆಯ ಮೇಲೆ ಪಡೆಯಲಾದ ಯಾವುದೇ ಕಟ್ಟಡಗಳನ್ನು ಒಳಗೊಳ್ಳುತ್ತದೆ

(i) ಸ್ಥಳೀಯ ಪ್ರಾಧಿಕಾರ ;

(ii) ಕಂಪನಿಗಳ ಅಧಿನಿಯಮ, 1955 (1956ರ ಕೇಂದ್ರ ಅಧಿನಿಯಮ ಸಂಖ್ಯೆ 1)ರ 3ನೇ ಪ್ರಕರಣದಲ್ಲಿ ಪರಿಭಾಷಿಸಲಾಗಿರುವ ಯಾವುದೇ ಕಂಪನಿಯಲ್ಲಿ ರಾಜ್ಯ ಸರ್ಕಾರವು ಶೇಕಡ 51 ರಷ್ಟಕ್ಕೆ ಕಡಿಮೆಯಿಲ್ಲದಂತೆ ಸಂದಾಯ ಮಾಡಿರುವ ಷೇರು ಬಂಡವಾಳವನ್ನು ಹೊಂದಿರುವ ಕಂಪನಿ ;

(iii) (ಕೇಂದ್ರ ಅಧಿನಿಯಮ) ಅಥವಾ ರಾಜ್ಯ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸ್ಥಾಪಿತವಾದ (ಕಂಪನಿಗಳ ಅಧಿನಿಯಮ, 1956 3ನೇ ಪ್ರಕರಣದಲ್ಲಿ ಪರಿಭಾಷಿಸಲಾಗಿರುವಂತಹ ಕಂಪನಿಯಾಗಿಲ್ಲದ) ಮತ್ತು ರಾಜ್ಯ ಸರ್ಕಾರದ ಒಡೆತನ ಹೊಂದಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ನಿಗಮ ; ಮತ್ತು

(iv) ರಾಜ್ಯ ಸರ್ಕಾರದ ಆಡಳಿತ ನಿರ್ವಹಣೆಯಲ್ಲಿರುವ ಮುಜರಾಯಿ ಸಂಸ್ಥೆ ಅಥವಾ ಮತೀಯ ಅಥವಾ ಧರ್ಮಾದಾಯ ಸಂಸ್ಥೆ ;

(v) **ಕರ್ನಾಟಕ ರಾಜ್ಯ** ವಕ್ಫ್ ಮಂಡಲಿಯ ಆಡಳಿತ ನಿರ್ವಹಣೆಯಡಿಯಿರುವ ವಕ್ಫ್ ; (vi) ರಾಜ್ಯ ಸರ್ಕಾರ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಜಂಟಿಯಾಗಿ ಮತ್ತು ಆಂಧ್ರರಾಜ್ಯ ಸರ್ಕಾರದ ಅಧಿನಿಯಮ, 1953(1953ರ ಕೇಂದ್ರ ಅಧಿನಿಯಮ ಸಂಖ್ಯೆ 30)ರ 66ನೇ ಪ್ರಕರಣದ (4)ನೇ ಉಪ ಪ್ರಕರಣದಡಿ ಭಾರತ ಸರ್ಕಾರವು ರಚಿಸಿದ ತುಂಗಭದ್ರಾ ಮಂಡಲಿಯ ಆಡಳಿತ ನಿರ್ವಹಣೆ ಅಥವಾ

**ವಿವರಣೆ** : ಈ ಖಂಡದ ಉದ್ದೇಶಗಳಿಗಾಗಿ "ಸ್ಥಳೀಯ ಪ್ರಾಧಿಕಾರ"ಎಂದರೇ

(ಎ) ಪೌರನಿಗಮ ;

(ಬಿ) ಪಟ್ಟಣ ಅಥವಾ ನಗರ ಪುರಸಭಾ ಪರಿಷತ್ತು

(ಬಿಬಿ) ಕರ್ನಾಟಕ ವ್ಯವಸಾಯೋತ್ಪನ್ನ ಮಾರುಕಟ್ಟೆ (ವಿನಿಯಮನ) ಅಧಿನಿಯಮ 1966 (1966ರ ಕರ್ನಾಟಕ ಅಧಿನಿಯಮ ಸಂಖ್ಯೆ 27) ರಡಿ ಸ್ಥಾಪಿತವಾದ ಮಾರುಕಟ್ಟೆ ಸಮಿತಿ ;

(ಸಿ) (ಮೈಸೂರು ನಗರ) ಅಭಿವೃದ್ಧಿ ಅಧಿನಿಯಮ್ 1903 (1903ರ ಮೈಸೂರು ಅಧಿನಿಯಮ ಸಂಖ್ಯೆ 3) ಮತ್ತು ಬೆಂಗಳೂರು ನಗರಾಭಿವೃದ್ಧಿ ಅಧಿನಿಯಮ 1945 (1945 ಮೈಸೂರು ಅಧಿನಿಯಮ ಸಂಖ್ಯೆ 5)ರಡಿ ರಚಿತವಾದ ನಗರಾಭಿವೃದ್ಧಿ ನ್ಯಾಸ ಮಂಡಲಿ ;

(ಡಿ) ತಾಲ್ಲೂಕು ಅಭಿವೃದ್ಧಿ ಮಂಡಲಿ ;

(ಇ) ಟೌನ್ ಪಂಚಾಯತಿ ಅಥವಾ ಗ್ರಾಮಪಂಚಾಯತಿ.

xx xx xx xx